# ಗರ್ಭಧಾರಣೆಗೆ ಕುತ್ತು ತರುವ 'ಪಿಸಿಓಡಿ'

ಮಹಿಳೆಯರ ಸಂತಾನೋತ್ಪತ್ತಿ ಸಾಮರ್ಥ್ಯಕ್ಕೆ ತೊಂದರೆ ಉಂಟು ಮಾಡುವ ಅನೇಕ ಸಮಸ್ಯೆಗಳಿವೆ. ಅದರಲ್ಲಿ 'ಪಿಸಿಓಡಿ' ಕೂಡ ಒಂದು. 'ಪಿಸಿಓಡಿ' ಅಂದರೆ ಪಾಲಿಸಿಸ್ಟಿಕ್ ಓವೇರಿಯನ್ ಡಿಸೀಸ್. ಇದನ್ನು 'ಪಿಸಿಓಎಸ್' ಎಂದೂ ಕೂಡ ಹೇಳಲಾಗುತ್ತದೆ. 10–15 ವರ್ಷಗಳ ಹಿಂದಿನ ತನಕ ಇದು ಅಷ್ಟೊಂದು ಸಾಮಾನ್ಯವಾಗಿರಲಿಲ್ಲ. ಎಲ್ಲೋ ಅಲ್ಲೊಬ್ಬರಿಗೆ, ಇಲ್ಲೊಬ್ಬರಿಗೆ ಅದು ಕಾಣಿಸುತ್ತಿತ್ತು ಈಗ ಇದು ಹೆಚ್ಚಿನ ಮಹಿಳೆಯರಿಗೆ ಸಮಸ್ಯೆಯಂತೆ ಕಂಡುಬರುತ್ತಿದೆ.

**ಏನು ಸಮಸ್ಯೆ?**

ಸಾಮಾನ್ಯ ಮಹಿಳೆಯರಿಗೆ 28 ರಿಂದ 30 ದಿನಗಳಿಗೊಮ್ಮೆ ಮುಟ್ಟಾಗುತ್ತದೆ. ಆದರೆ 'ಪಿಸಿಓಡಿ' ಸಮಸ್ಯೆ ಇರುವ ಮಹಿಳಗೆ ಅದು ತೀರ ತಡವಾಗಿ ಅಂದರೆ 3 ತಿಂಗಳಿಗೊಮ್ಮೆ ಕೆಲವೊಮ್ಮೆ 6 ತಿಂಗಳಿಗೊಮ್ಮೆ ಆಗಬಹುದು. ರಕ್ತಸ್ರಾವ ಶುರವಾದರೆ 4 – 5 ದಿನಗಳ ಬಳಿಕವೂ ಅದು ಮುಂದುವರಿಯಲ್ಪಡುತ್ತದೆ. 15 ದಿನಗಳ ಬಳಿಕ ಅದು ಪುನಃ ಮರುಕಳಿಸುತ್ತದೆ. ಇಲ್ಲಿ ಎಲ್ಲವೂ ಅನಿಯಮಿತವಾಗಿರುತ್ತದೆ.

**ಪಿಸಿಓಡಿ ಲಕ್ಷಣಗಳು:**

ರಕ್ತದಲ್ಲಿ ಇನ್ಸುಲಿನ್ ಪ್ರಮಾಣ ಹೆಚ್ಚಿ ಟೆಸ್ಟೋಸ್ಟಿರಾನ್ ಹಾರ್ಮೋನು ಹೆಚ್ಚಾಗುತ್ತದೆ. ಇದು ಬೊಜ್ಜು ಕಾಣಿಸಿಕೊಳ್ಳಲು ಕಾರಣವಾಗುತ್ತದೆ. ನಾನು ಸರಿಯಾಗಿಯೇ ಆಹಾರ ಸೇವನೆ ಮಾಡುತ್ತಿದ್ದೇನೆ, ವ್ಯಾಯಾಮ, ನಡಿಗೆ ಅನುಸರಿಸುತ್ತಿದ್ದೇನೆ. ಆದರೂ ದೇಹದ ತೂಕ ಏಕೆ ಹೆಚ್ಚಾಗುತ್ತಿದೆ ಎಂಬುದು ಅನೇಕರಿಗೆ ಯಕ್ಷಪ್ರಶ್ನೆಯಾಗಿ ಕಾಡುತ್ತದೆ.

6 ತಿಂಗಳಲ್ಲಿ 4–5 ಕಿಲೋ ತೂಕ ಹೆಚ್ಚಾಗುತ್ತದೆ. ಮುಖದಲ್ಲಿ ಮೊಡವೆಗಳು ಕಾಣಿಸಿಕೊಳ್ಳಬಹುದು. ಕೆನ್ನೆ, ತುಟಿಯ ಮೇಲ್ಭಾಗ ಹಾಗೂ ಕಿವಿಯ ಅಕ್ಕಪಕ್ಕ ಕೂದಲು ಕಾಣಿಸಕೊಳ್ಳಬಹುದು. ಮೇಲ್ಕಂಡ ಲಕ್ಷಣಗಳ ಜತೆಗೆ ಪಿಸಿಓಡಿ ಸಮಸ್ಯೆ ಇರುವ ಮಹಿಳೆಗೆ ಲೈಂಗಿಕ ಆಸಕ್ತಿ ಕುಗ್ಗಬಹುದು. ಚರ್ಮದ ಅಂದ ಹೊರಟು ಹೋಗುತ್ತದೆ. ಥೈರಾಯ್ಡ್ ಸಮಸ್ಯೆ ಕಾಣಿಸಿಕೊಳ್ಳಬಹುದು. ಏಕಾಗ್ರತೆ ಕುಗ್ಗಬಹುದು.

**ಏನು ಕಾರಣ?**

ಪಿಸಿಓಡಿ ಸಮಸ್ಯೆಗೆ ಜೀವನಶೈಲಿಯ ಏರುಪೇರು, ಹಾರ್ಮೋನುಗಳ ಅಸಮತೋಲನ, ದೈಹಿಕ ವ್ಯಾಯಾಮದ ಕೊರತೆ, ಆಧುನಿಕ ಆಹಾರ ಪದ್ಧತಿಯನ್ನು ಅಧಿಕವಾಗಿ ಅವಲಂಬಿಸಿರುವುದು, ವಂಶಪಾರಂಪರೆಯಿಂದಲೂ ಇದು ಬರುವ ಸಾಧ್ಯತೆ ಇರುತ್ತದೆ.

**ಗರ್ಭಧಾರಣೆಗೆ ಪಿಸಿಓಡಿ ಹೇಗೆ ಅಡ್ಡಿಯಾಗುತ್ತದೆ?**

ಮುಟ್ಟಾದ 12 ರಿಂದ 15 ದಿನಗಳ ಅವಧಿಯಲ್ಲಿ ಬಿಡುಗಡೆಯಾಗಬೇಕಾದ ಅಂಡಾಣು ಪಿಸಿಓಡಿ ಸಮಸ್ಯೆ ಇರುವವರಿಗೆ ಬಿಡುಗಡೆಯಾಗುವುದೇ ಇಲ್ಲ. ಅಂಡಕೋಶದ ಎರಡೂ ಭಾಗದಲ್ಲಿ ನೀರ್ಗುಳ್ಳೆಗಳು ತುಂಬಿಕೊಂಡಿರುತ್ತವೆ. ಅಂಡಾಣು ಬಿಡುಗಡೆಯಾಗದೇ ಗರ್ಭಧಾರಣೆ ಸಾಧ್ಯವಾಗುವುದಿಲ್ಲ.




**ಪರೀಕ್ಷೆ ಹೇಗೆ?**

ಲಕ್ಷಣಗಳನ್ನು ಆಧರಿಸಿ ರಕ್ತಪರೀಕ್ಷೆ ಕೈಗೊಂಡಾಗ ಅವರಲ್ಲಿ LH ಹಾರ್ಮೋನು FH ಹಾರ್ಮೋನಿಗಿಂತ ಜಾಸ್ತಿ ಪ್ರಮಾಣದಲ್ಲಿರುತ್ತದೆ. ಸ್ಕ್ಯಾನ್‌ನಲ್ಲಿ ನಿರ್ಗುಳ್ಳೆಗಳು ತುಂಬಿಕೊಂಡಿರುವುದು, ಅಂಡಾಣು ಬಿಡುಗಡೆಯಾಗದೇ ಇರುವುದು ಖಚಿತವಾಗುತ್ತದೆ. ಅವಿವಾಹಿತರಿಗೆ ಟ್ರಾನ್ಸ್ ಅಬ್ಡಾಮಿನಲ್, ವಿವಾಹಿತರಿಗೆ ಟ್ರಾನ್ಸ್‌ವೈಜೈನಲ್ ಪರೀಕ್ಷೆಯಿಂದ ಅಂಡಕೋಶದ ಸಂಪೂರ್ಣ ಚಿತ್ರಣ ದೊರಕುತ್ತದೆ. ಬಳಿಕ ಹಾರ್ಮೋನು ಪರೀಕ್ಷೆ ಕೈಗೊಳ್ಳಲಾಗುತ್ತದೆ.

**ಚಿಕಿತ್ಸೆ ಹೇಗೆ?**

ಎಲ್ಲಾ ಪರೀಕ್ಷೆಗಳ ಬಳಿಕ 3ನೇ ದಿನದಿಂದಲೇ ಅಂಡಾಣು ಬೆಳವಣಿಗೆಗೆ ಮಾತ್ರೆ ಕೊಡಲಾಗುತ್ತದೆ. 5 ದಿನ ಮಾತ್ರ ಸೇವಿಸಿ 7ನೇ ದಿನ ಬಂದಾಗ ಪುನಃ ಸ್ಕ್ಯಾನ್ ಮಾಡಿಸಿ ಅಂಡಾಣು ಬೆಳವಣಿಗೆ ಆಗಿದೆಯೇ ಎಂದು ಕಂಡುಕೊಳ್ಳಲಾಗುತ್ತದೆ. ಅಂಡಾಣು ಬಿಡುಗಡೆ ಆಗಿರುವುದು ಖಚಿತವಾದರೆ ಅದೇ ತಿಂಗಳು ಗರ್ಭಧರಿಸಲು ಸಾಧ್ಯವಾಗುತ್ತದೆ. ಮಾತ್ರೆಯಿಂದ ಯಾವುದೇ ಪರಿಣಾಮ ಆಗದೇ ಇದ್ದಲ್ಲಿ ಚುಚ್ಚುಮದ್ದು ಕೊಟ್ಟು ಅಂಡಾಣು ಬಿಡುಗಡೆ ಆಗುವಂತೆ ನೋಡಿಕೊಳ್ಳಲಾಗುತ್ತದೆ. ಗಂಡನಲ್ಲಿ ಯಾವುದಾದರೂ ಸಮಸ್ಯೆ ಇದ್ದಲ್ಲಿ ಗಂಡನ ವಿರ್ಯಾಣು ಮತ್ತು ಹೆಂಡತಿಯ ಅಂಡಾಣು ಪಡೆದು ಐಯುಐ ಪ್ರಕ್ರಿಯೆಯಲ್ಲಿ ಗರ್ಭಧಾರಣೆ ನೆರವೇರಿಸಲಾಗುತ್ತದೆ.

**ಚಿಕಿತ್ಸೆ ತಡವಾದರೆ ಅಪಾಯಕ್ಕೆ ಆಹ್ವಾನ**

ಸಕಾಲದಲ್ಲಿ ಚಿಕಿತ್ಸೆ ತೆಗೆದುಕೊಂಡರೆ 'ಪಿಸಿಓಡಿ'ಯನ್ನು ಸಾಕಷ್ಟು ಮಟ್ಟಿಗೆ ನಿಯಂತ್ರಣದಲ್ಲಿಡಬಹುದು.

ಚಿಕಿತ್ಸೆ ತಡವಾದರೆ, ಅದರ ಬಗ್ಗೆ ನಿರ್ಲಕ್ಷ್ಯ ತೋರಿದರೆ, ರಕ್ತಸ್ರಾವ ಉಲ್ಬಣಗೊಂಡು ರಕ್ತಹೀನತೆ ಉಂಟಾಗಬಹುದು.

ಚಿಕಿತ್ಸೆ ಪಡೆಯದಿದ್ದರೆ ರಕ್ತದೊತ್ತಡ, ಮಧುಮೇಹ, ಕೊಲೆಸ್ಟೆರಾಲ್, ಉಬ್ಬಸದಂತಹ ಸಮಸ್ಯೆಗಳು ಉದ್ಭವಿಸುತ್ತವೆ. ಎಂಡೋಮೆಟ್ರಿಯಲ್ ಕ್ಯಾನ್ಸರ್ ಕೂಡ ಬರಬಹುದು.

**ಪಿಸಿಓಡಿ ಡ್ರಿಲ್ಲಿಂಗ್:**

ಔಷಧಿ ಮಾತ್ರೆ ಸೇವನೆ ಬಳಿಕ ಅಂಡಾಣು ಬೆಳವಣಿಗೆ ಆಗದಿದ್ದರೆ, ಅದು ಬಿಡುಗಡೆ ಆಗದಿದ್ದರೆ ಕೊನೆಯ ಉಪಾಯವೆಂಬಂತೆ 'ಲ್ಯಾಪ್ರೋಸ್ಕೊಪಿ' ಮೂಲಕ ಪಿಸಿಓಡಿ ಡ್ರಿಲ್ಲಿಂಗ್ ಮಾಡಲಾಗುತ್ತದೆ. ಡ್ರಿಲ್ಲಿಂಗ್ ಎಂದರೆ ನೀರ್ಗುಳ್ಳೆಗಳನ್ನು ಪಂಕ್ಚರ್ ಮಾಡುವುದಾಗಿದೆ. ಅವು ನಿವಾರಣೆಯಾದ ಬಳಿಕ 6 ತಿಂಗಳಿನಿಂದ 1 ವರ್ಷದ ತನಕ ಅಂಡಕೋಶ ಪುನಃ ಮೊದಲಿನಂತೆ ಕೆಲಸ ಮಾಡುತ್ತದೆ. ಇದೊಂದು ಸುಲಭ ಶಸ್ತ್ರಚಿಕಿತ್ಸೆ ವಿಧಾನವಾಗಿದೆ. ಮುಂಜಾನೆ ಆಸ್ಪತ್ರೆಗೆ ಬಂದು ಸಂಜೆ ಮನೆಗೆ ಮರಳಬಹುದು.

**ಗರ್ಭನಾಳಗಳಿಗೂ ಚಿಕಿತ್ಸೆ**

ಪಿಸಿಓಡಿ ಡ್ರಿಲ್ಲಿಂಗ್ ಸಂದರ್ಭದಲ್ಲಿ ಗರ್ಭನಾಳಗಳು ಸುಸ್ಥಿತಿಯಲ್ಲಿ ಇವೆಯೇ ಎಂದು ಪರೀಕ್ಷೆ ಮಾಡಲಾಗುತ್ತದೆ. ಅಲ್ಲಿ ಏನಾದರೂ ಸಮಸ್ಯೆ ಇದ್ದರೆ ಅದನ್ನು ನಿವಾರಿಸಲಾಗುತ್ತದೆ. ಗರ್ಭಕೋಶದ ಬಯಾಪ್ಸಿ ತೆಗೆದು ಅದನ್ನೂ ಕೂಡ ಪರೀಕ್ಷೆ ಒಳಪಡಿಸಲಾಗುತ್ತದೆ.

**ಜೀವನಶೈಲಿಯ ಬದಲಾವಣೆ:**

ಪಿಸಿಓಡಿ ಡ್ರಿಲ್ಲಿಂಗ್ ಬಳಿಕ ಮಲಬದ್ಧತೆ ಉಂಟಾಗದಂತೆ ನೋಡಿಕೊಳ್ಳಬೇಕು, ಸಾಕಷ್ಟು ನೀರು ಹಾಗೂ ದ್ರವ ಪದಾರ್ಥಗಳನ್ನು ಸೇವಿಸಬೇಕು. ಜಂಕ್‌ಫುಡ್ ಸೇವನೆ ನಿಲ್ಲಿಸಬೇಕು. ಅಕ್ಕಿ ಪದಾರ್ಥಗಳನ್ನು ಆದಷ್ಟು ಕಡಿಮೆ ಸೇವಿಸಬೇಕು, ಅದಕ್ಕೆ ಪರ್ಯಾಯವಾಗಿ ರೆಡ್‌ರೈಸ್, ಬ್ರೌನ್‌ರೈಸ್, ಬಳಸಬೇಕು, ಸಕ್ಕರೆ ಉಪ್ಪು ಮೈದಾ ಆದಷ್ಟು ಇವುಗಳ ಸೇವನೆ ಕಡಿಮೆ ಮಾಡಿಕೊಳ್ಳಬೇಕು.

**ಪಿಸಿಓಡಿ ಮತ್ತು ಗರ್ಭಧಾರಣೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ಹಾಗೂ ಚಿಕಿತ್ಸೆಗಳಿಗಾಗಿ "ಗರ್ಭಗುಡಿ" ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ:**



ಗರ್ಭಗುಡಿ GarbhaGudi

## GARBHAGUDI IVF CENTRE

**MAIN & REG. OFFICE:** 210/A, 14th Main, 50ft Road, Hanumanthanagar, Bangalore-50. **Mob: +91 988691556**

**Branches at:** HRBR Layout- M:8861433339 Electronic City- M: 8861811116 South End Circle- M: 9972473555

**E-mail: info@garbhagudi.com Web: www.garbhagudi.com Tollfree: 1800-200-8288**